<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮಂಡ್ಯ</u>

## ಸ್ಪೆಷಲ್ ಕೇಸ್ ನಂಬರ್‌ಃ **123/2022**

ಪಿರ್ಯಾದುದಾರರುಃ ಅರಕೆರೆ ಪೊಲೀಸ್ ಠಾಣೆ

**-ವಿರುದ್ಧ-**

| | |
|---|---|
| ಆರೋಪಿ-**1** | ರಾಮ್ ದೇವ್. ಎಲ್.ಜಿ. |
| ತಂದೆಯ ಹೆಸರು | ಜಯದೇವ್. ಎಲ್ |
| ವಯಸ್ಸು | ವರುಷ |
| ಉದ್ಯೋಗ | |
| ವಾಸ ಸ್ಥಳ | 3 ನೇ ಕ್ರಾಸ್, ಗಾಂಧಿನಗರ, ಮಂಡ್ಯ. |

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರನ್ವಯ ದಾಖಲಿಸಿಕೊಂಡ ಆರೋಪಿಯ ಹೇಳಿಕೆ</u>

ಪ್ರಶ್ನೆ 1. ನ್ಯಾಯಾಲಯದಲ್ಲಿ ಅಭಿಯೋಜನದ ಪರವಾಗಿ ವಿಚಾರಣೆಗೊಳಪಟ್ಟ ಪ್ರಾ.ಸಾ-1 ರಿಂದ ಪ್ರಾಸಾ-4 ರವರ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿರುವಿರಾ?

ಉತ್ತರ :

ಪ್ರಶ್ನೆ 2. ಪ್ರಾ.ಸಾ-2/ಸತೀಶ್ ರವರು ತಮ್ಮ ಸಾಕ್ಷ್ಯದಲ್ಲಿ ನಾನು 26.09.2019 ರಂದು ಸಂಜೆ ಸುಮಾರು 5.20 ಗಂಟೆಗೆ ಠಾಣೆಯಲ್ಲಿ ಇದ್ದಾಗ ಚನ್ನನಕೆರೆ ಗ್ರಾಮದ ವ್ಯಾಪ್ತಿಯಲ್ಲಿರುವ ಜೆ.ಜೆ.ಕ್ರಶರ್ ರಾಮದೇವ್ ಎನ್ನುವರ ಕಲ್ಲುಕ್ವಾರೆಯಲ್ಲಿ ಅಕ್ರಮವಾಗಿ ಬಂಡೆಯನ್ನು ಸಿಡಿಮದ್ದುಗಳಿಂದ ಸಿಡಿಸುತ್ತಿದ್ದಾರೆಂದು ಮಾಹಿತಿ ಬಂದ ಕೂಡಲೇ ಸಿಬ್ಬಂದಿಯನ್ನು ಕರೆದುಕೊಂಡು ಠಾಣೆಯಿಂದ ಹೊರಟೆನು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 3. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ನಾನು ಘಟನೆ ನಡೆದಿದೆ ಎನ್ನುವ ಸ್ಥಳದಲ್ಲಿ ತನಿಖೆ ನಡೆಸುವಾಗ ಪಂಚರಾಗಿ ಕೆಲಸ ಮಾಡಲು ಅರಕೆರೆ ಗ್ರಾಮದ ವೃತ್ತದ ಬಳಿ ನಿಂತಿದ್ದ ಅಮೃತರಾಜು ಮತ್ತು ಪ್ರಕಾಶ್ ಎಂಬುವವರಿಗೆ

ನೋಟಿಸು ಜಾರಿ ಮಾಡಿ ಪಂಚರಾಗಿ ಕೆಲಸ ಮಾಡುವಂತೆ ಕೇಳಿಕೊಂಡಾಗ ಅಮೃತರಾಜು ಮತ್ತು ಪ್ರಕಾಶ್ ಒಪ್ಪಿಕೊಂಡರು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 4. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ನಾನು ಸಿಬ್ಬಂದಿಯ ಜೊತೆಯಲ್ಲಿ ಪಂಚರಾದ ಅಮೃತರಾಜು ಮತ್ತು ಪ್ರಕಾಶ್ ಮೇಲೆ ಹೇಳಿದ ಸ್ಥಳಕ್ಕೆ ಸಂಜೆ 6.05 ಗಂಟೆಗೆ ತಲುಪಿ ನೋಡಿದಾಗ 3 ಜನರು ಕ್ವಾರೆಯಲ್ಲಿ ಕುಳಿಯನ್ನು ಒಡೆದು ಅಕ್ರಮವಾಗಿ ಬಂಡೆಯನ್ನು ಸಿಡಿಸಲು ಮದ್ದನ್ನು ತುಂಬುತ್ತಿದ್ದುದು ಕಂಡು ಬಂದಿತು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 5. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ನಾನು ಮತ್ತು ಸಿಬ್ಬಂದಿ ಪಂಚರ ಸಮಕ್ಷಮ ಸ್ಥಳ ಪರಿಶೀಲಿಸಿದಾಗ ಒಂದು ಪ್ಲಾಸ್ಟಿಕ್ ಚೀಲದಲ್ಲಿ ಜಿಲಿಟಿನ್ ಕಡ್ಡಿಗಳು, ಇನ್ನೊಂದು ಪ್ಲಾಸ್ಟಿಕ್ ಚೀಲದಲ್ಲಿ ಸುಮಾರು 02 ಕೆ.ಜಿ.ಯಷ್ಟು ಅಮೋನಿಯಂ ನೈಟ್ರೇಟ್ (ಸ್ಫೋಟಕಕ್ಕೆ ಉಪಯೋಗಿಸುವ ವಸ್ತು), ಎಲೆಕ್ಟ್ರಾನಿಕ್ ಡಿಟೋನೇಟರ್ ಗಳು ಬೂಸ್ಟರ್ಗಳು ಕಂಡುಬಂದಿದ್ದು, ಸದರಿ ಕ್ವಾರೆಯಲ್ಲಿ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಸಿಡಿಮದ್ದನ್ನು ಉಪಯೋಗಿಸಿ ಅಕ್ರಮವಾಗಿ ಸಿಡಿಮದ್ದುಗಳನ್ನು ತುಂಬಿಸಿ ಬಂಡೆಗಳನ್ನು ಸಿಡಿಸಿ ಕಳ್ಳತನದಿಂದ ಸಾಗಾಣಿಕೆ ಮಾಡಲು ಪ್ರಯತ್ನಿಸುತ್ತಿರುವುದು ಕಂಡುಬಂದಿತು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 6. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ನಾನು ಮೇಲೆ ಹೇಳಿದ ಘಟನೆಯ ಕುರಿತು ಸ್ಥಳದಲ್ಲಿ ವರದಿಯನ್ನು ತಯಾರು ಮಾಡಿ ಪಿ.ಸಿ.251 ನೇ ನಾಗೇಶ್ ರವರ ಮೂಲಕ ಠಾಣೆಗೆ ಕಳುಹಿಸಿದ್ದೇನೆ ಎಂದೂ, ಠಾಣೆಯಲ್ಲಿ ಇದ್ದ ಎ.ಎಸ್.ಐ ಅವರು

ನಾನು ಕಳುಹಿಸಿದ್ದ ವರದಿಯ ಆಧಾರದ ಮೇಲೆ ರಾಮ್ ದೇವ್ ಎನ್ನುವವರ ವಿರುದ್ದ 164/19 ನೇ ಪ್ರಕರಣವನ್ನು ದಾಖಲಿಸಿ ಕೋರ್ಟಿಗೆ ಪ್ರಥಮ ವರ್ತಮಾನ ವರದಿ ಕಳುಹಿಸಿದ್ದಾರೆ ಮತ್ತು ನನಗೆ ಮಾಹಿತಿ ಕಳುಹಿಸಿದ್ದಾರೆ ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 7. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ನಾನು ಠಾಣೆಯಲ್ಲಿ ಪ್ರಕರಣ ದಾಖಲಾದ ಮಾಹಿತಿ ಬಂದ ನಂತರ ಪಂಚರ ಸಮಕ್ಷಮ ಸ್ಥಳದಲ್ಲಿ ಇದ್ದ ಒಂದು ಪ್ಲಾಸ್ಟಿಕ್ ಚೀಲದಲ್ಲಿದ್ದ 89- ಜಿಲಿಟಿನ್ ಕಡ್ಡಿಗಳು, ಒಂದು ಪ್ಲಾಸ್ಟಿಕ್ ಚೀಲದಲ್ಲಿ ಸುಮಾರು 02 ಕೆ.ಜಿ.ಯಷ್ಟು ಅಮೋನಿಯಂ ನೈಟ್ರೇಟ್ (ಸ್ಫೋಟಕಕ್ಕೆ ಉಪಯೋಗಿಸುವ ವಸ್ತು), 63 ಎಲೆಕ್ಟ್ರಾನಿಕ್ ಡಿಟೋನೇಟರ್ ಗಳು, ಬೂಸ್ಟರ್‌ಗಳು-06 ಗಳನ್ನು ಮಹಜರ್ ಬರೆದು ವಶಪಡಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 8. ಪ್ರಾ.ಸಾ-2 ರವರು ತಮ್ಮ ಸಾಕ್ಷ್ಯದಲ್ಲಿ ನಾನು ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಂಡ ವಿಚಾರವನ್ನು ಠಾಣಾ ಪಿ.ಎಫ್ ನಂ.179/19 ರಲ್ಲಿ ನಮೂದಿಸಿ ಕೋರ್ಟಿಗೆ ವರದಿ ಕಳುಹಿಸಿದ್ದೆನು ಮತ್ತು ನಾನು ವಶಪಡಿಸಿಕೊಂಡಿದ್ದ ಸ್ಫೋಟಕ ವಸ್ತುಗಳನ್ನು ಮಹಜರಿನ ಜೊತೆಯಲ್ಲಿ ಸಿ.ಪಿ.ಐ ಕೃಷ್ಣಪ್ಪ ರವರಿಗೆ ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 9. ಪ್ರಾ.ಸಾ-3/ಪ್ರಕಾಶ್ ರವರು ತಮ್ಮ ಸಾಕ್ಷ್ಯದಲ್ಲಿ 2019 ರಲ್ಲಿ ಪೊಲೀಸರು ನನ್ನನ್ನು ಚನ್ನನಕೆರೆ ಜಮೀನಿಗೆ ಕರೆದುಕೊಂಡು ಹೋದಾಗ ಚನ್ನನಕೆರೆ ಗ್ರಾಮದ ಜಮೀನಿನಲ್ಲಿ ಇದ್ದ ಕೆಲವು ವಸ್ತುಗಳನ್ನು ಅಂದರೆ ತಂತಿಗಳನ್ನು ವಶಪಡಿಸಿಕೊಂಡು ದಾಖಲೆಯನ್ನು ತಯಾರಿಸಿ ನನ್ನಿಂದ ನಿಪಿ.4(ಬಿ) ರಲ್ಲಿ ಗುರುತಿಸಿರುವ ಸಹಿ ಮಾಡಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 10. ಪ್ರಾ.ಸಾ-4/ಕೃಷ್ಣಪ್ಪ.ಕೆ.ವಿ. ರವರು ತಮ್ಮ ಸಾಕ್ಷ್ಯದಲ್ಲಿ ದಿಃ 28.09.2019 ರಂದು ಈ ಪ್ರಕರಣದ ಕಡತವನ್ನು ಚಾಸಾ-1 ನೇ ಸತೀಶ ಅರಕೆರೆ PSI ರವರಿಂದ ಪಡೆದ ನಂತರ ದಿಃ 28.09.2019 ರಂದು ಚಾಸಾ-2 ನೇ ಪ್ರಕಾಶ, ಚಾಸಾ-3 ನೇ ಹನುಮಂತ ರಾಜು ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 11. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ 28.09.2019 ರಂದು ಪೋಲಿಸ್ ಸಿಬ್ಬಂದಿಯಾದ ಚಾಸಾ-5 ರಿಂದ 9 ನೇ ರವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದೇನೆ ಮತ್ತು ದಿಃ 01.10.2019 ರಂದು ಜಿಲ್ಲಾ ಪೊಲೀಸ್ ಅಧೀಕ್ಷಕರ ಮೂಲಕ ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಸ್ಫೋಟಕ ವಸ್ತುಗಳನ್ನು ನಾಶಪಡಿಸಿಕೊಡಲು ಬೆಂಗಳೂರು BDDS ಅಧಿಕಾರಿಗಳಿಗೆ ಪತ್ರ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 12. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ ಸ್ಫೋಟಕ ವಸ್ತುಗಳನ್ನು 01.10.2019 ರಂದು ಪಾಂಡವಪುರ ಚಂದ್ರಾ ಬಡಾವಣೆಯಲ್ಲಿ ಇರುವ ನಾಜಿಂ ಉಲ್ಲಾ ರವರ ಮಾಲೀಕತ್ವದ ಸಂಗ್ರಹಾಲಯದ ಸಿಬ್ಬಂದಿಗೆ ನಾನು ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 13. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ ನಾನು 20.11.2019 ರಂದು BDDS ಅಧಿಕಾರಿಯಾದ ಚಾಸಾ-10 ನೇ ರವರು ಸ್ಫೋಟಕ ವಸ್ತುಗಳನ್ನು ನಾಶಪಡಿಸಿ ಉಳಿದ ಅವಶೇಷಗಳನ್ನು ಸಂಗ್ರಹಿಸಿ ಕೊಟ್ಟಿದ್ದನ್ನು ಪಡೆದು

ರಾಸಾಯನಿಕ ಪರೀಕ್ಷೆಗಾಗಿ ಬೆಂಗಳೂರು RFSL ಕಛೇರಿಗೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 14. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ ನಾನು 20.11.2019 ರಂದು BDDS ಅಧಿಕಾರಿಯಾದ ಚಾಸಾ-10 ನೇ ರವರು ಸ್ಫೋಟಕ ವಸ್ತುಗಳನ್ನು ನಾಶಪಡಿಸಿ ಉಳಿದ ಅವಶೇಷಗಳನ್ನು ಸಂಗ್ರಹಿಸಿ ಕೊಟ್ಟಿದ್ದನ್ನು ಪಡೆದು ರಾಸಾಯನಿಕ ಪರೀಕ್ಷೆಗಾಗಿ ಬೆಂಗಳೂರು RFSL ಕಛೇರಿಗೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 15. ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಇದೆಯೇ?

ಉತ್ತರ :

ಪ್ರಶ್ನೆ 16. ಹೇಳುವುದು ಇನ್ನೇನಾದರೂ ಇದೆಯೇ?

ಉತ್ತರ :

(ಮೇಲ್ಕಂಡ ಪ್ರಶ್ನೆಗಳನ್ನು ನಾನೇ ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ಹೇಳಿ, ಅವರು ಕೊಟ್ಟ ಉತ್ತರಗಳನ್ನು ನಾನೇ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸುತ್ತೇನೆ)

**(ಜೆ.ಎನ್.ಸುಬ್ರಮಣ್ಯ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.

ದಿನಾಂಕ: **17.03.2026.**
ಮಂಡ್ಯ